ಓ ಎಸ್ . ನಂ– 3/2019

Pw–1

<u>ದಿನಾಂಕಃ 04–07–2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟೀ ಸವಾಲುಃ ಶ್ರೀ. ಎಸ್ ಪಿ ಪಿ 2 ನೇ ಪ್ರತಿವಾದಿ ಪರ ವಕೀಲರಿಂದ–**

ನನ್ನ ಮಾಲಿಕತ್ವದ ವಿ ಪಿ ಸಿ ನಂ 29 ಇದು ಅಲಬಾಳ ಗ್ರಾಮದಲ್ಲಿ ಇರುತ್ತದೆ . ಸದರಿ ಆಸ್ತಿ ಸುಮಾರು 100 ವರ್ಷಗಳಿಂದ ಬಂದಿರುತ್ತದೆ ಸಾಕ್ಷಿ ಮುಂದುವರೆದು ಸದರಿ ಆಸ್ತಿಯು ನನ್ನ ಮುತ್ಯಾನ ಹೆಸರಿನಲ್ಲಿ ಮುಂಚಿತವಾಗಿ ಇತ್ತು . ಸದರಿ ಆಸ್ತಿಯ ಪೂರ್ವಕ್ಕೆ ಮಲ್ಲಪ್ಪಾ ಬಿರಾದರ ರವರ ಖುಲ್ಲಾ ಜಾಗೆ ಇದೆ . ಪಶ್ಚಿಮಕ್ಕೆ ಮಹಾದೇವಿ ಬಿದಾದರ ರವರ ಎಂದರೆ ಪ್ರತಿವಾದಿ ನಂ 3 ರಿಂದ 6 ರವರ ಖುಲ್ಲಾ ಜಾಗೆ ಇದೆ . ದಕ್ಷಿಣಕ್ಕೆ ಪ್ರತಿವಾದಿ ನಂ .7 ರ ಮನೆ ಇದೆ . ಉತ್ತರಕ್ಕೆ ನಮ್ಮ ಆಸ್ತಿ ಇದೆ .

ದಾವಾ ಆಸ್ತಿಯ ಕ್ಷೇತ್ರ ಪೂರ್ವ ಪಶ್ಚಿಮ 73 ಅಡಿ ಉತ್ತರ ದಿಕ್ಕಿಣ 65 ಅಡಿ ಇರುತ್ತದೆ . ಸದರಿ ಉದ್ದಳತೆ ತೋರಿಸಲು ನಾನು ನ್ಯಾಯಾಲಯದ ಮುಂದೆ ಖರೀದಿ ಪತ್ರವನ್ನು ಹಾಜರು ಪಡಿಸಿರುವದಿಲ್ಲ . 7 ನೇ ಪ್ರತಿವಾದಿ ನನ್ನ ಆಸ್ತಿಯಲ್ಲಿ ಅತಿಕ್ರಮಣ ಮಾಡಿರುತ್ತಾರೆ . ಸಾಕ್ಷಿ ಮುಂದುವರೆದು ಆತನು ನನ್ನ ಆಸ್ತಿಯಲ್ಲಿ ಕಟ್ಟೆ ಕಟ್ಟಿರುತ್ತಾನೆ ಎಂದು ನುಡಿಯುತ್ತಾರೆ . ಈ ಮಾತನ್ನು ನಾನು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ನಮ್ಮ ಆಸ್ತಿಯ ಉದ್ದ ಅಳತೆಯನ್ನು ತೋರಿಸಲು ಯಾವುದೇ ದಾಖಲಾತಿಗಳನ್ನು ಪಂಚಾಯತಿಗೆ ಸಲ್ಲಿಸಲ್ಲದ ಕಾರಣ ಪಂಚಾಯತಿ ರವರು ನನ್ನ ಹೆಸರಿನಲ್ಲಿ ಸದರಿ ಆಸ್ತಿಯ ಉತಾರೆಯನ್ನು ತಯಾರಿಸಿರುವದಿಲ್ಲ ಎಂದರೆ ಸರಿಯಲ್ಲ . ನನ್ನ ಅರ್ಜಿಯನ್ನು ಮುತ್ತೂರ ಪಂಚಾಯತಿ ರವರು ವಜಾ ಮಾಡಿದ ಕಾರಣ ನಾನು ಅದನ್ನು ಪ್ರಶ್ನಿಸಿ ತಾಲೂಕಾ ಪಂಚಾಯತ ದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ . ಸದರಿ ಮೇಲ್ಮನವಿ ಸಹ ತಾಲೂಕಾ ಪಂಚಾಯತಿ ರವರು ವಜಾ ಮಾಡಿರುತ್ತಾರೆ ಎಂದರೆ ಸಾಕ್ಷಿ ಪಂಚಾಯತಿ ರವರು ತನ್ನ ವ್ಯಾಪ್ತಿಗೆ ಬರುವದಿಲ್ಲ ಎಂದು ಹೇಳಿ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ .

ಪಾಟೀ ಸವಾಲು ಶ್ರೀ ಸಿ ಎಸ್ ಬಿ 3 ರಿಂದ 7 ಮತ್ತು 9 ರಿಂದ 13 ನೇ ಪ್ರತಿವಾದಿ ಪರ ವಕೀಲರಿಂದಃ– ಹಿರಿಯರ ಕಾಲದಿಂದಲೂ ಇಲ್ಲಿಯವರಗೆ ನನ್ನ ಆಸ್ತಿಯ ಉದ್ದ ಆಳತೆಯನ್ನು ತೋರಿಸಲು ಪಂಚಾಯತಿಯಲ್ಲಿ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿ . ಹಿರಿಯರ ನಂತರ ನನ್ನ ಹೆಸರು ದಾವಾ ಆಸ್ತಿಗೆ ನಮೂದು ಆದ ಬಗ್ಗೆ ತೋರಿಸಲು ಯಾವುದೇ ದಾಖಲಾತಿಗಳು ಪಂಚಾಯತಿಯಲ್ಲಿ ಲಭ್ಯ ಇಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ನಾನು ಪ್ರತಿ ವರ್ಷ ತೆರಿಗೆ ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ . ಸಾಮಾನ್ಯವಾಗಿ ಹಿರಿಯರ

ನಂತರ ನನ್ನ ಹೆಸರು ದಾಖಲ ಮಾಡುವ ಕಾಲಕ್ಕೆ ಒಂದು ವರದಿ ನೀಡಬೇಕು ಅದರ ಮೇಲೆ ಪಂಚಾಯತಿ ಇವರು ಠರಾವು ಮಾಡುತ್ತಾರೆ ಸದರಿ ಠರಾವಿನ ನಕಲನ್ನು ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವದಿಲ್ಲ . ನಾನು ಪಂಚಾಯತಿ ರವರಿಗೆ ವರದಿ ನೀಡಿದ ಬಗ್ಗೆ ಮತ್ತು ಪಂಚಾಯತಿ ಇವರು ನನ್ನ ಹೆಸರಿನಲ್ಲಿ ದಾವಾ ಆಸ್ತಿಗೆ ಸಂಬಂದಿಸಿದಂತೆ ಠರಾವು ಮಾಡಿದ ಬಗ್ಗೆ ಪಂಚಾಯತಿಯಲ್ಲಿ ಯಾವುದೇ ದಾಖಲಾತಿಗಳು ಲಭ್ಯ ಇಲ್ಲ ಎಂದರೆ ಸರಿಯಲ್ಲ .

ನಾನು 2016 ನೇ ಸಾಲಿನಲ್ಲಿ ದಾವಾ ಆಸ್ತಿಯನ್ನು ಅಳತೆ ಮಾಡಲು ಮೂತ್ತೂರ ಗ್ರಾಮ ಪಂಚಾಯತಿಗೆ ಅರ್ಜಿಯನ್ನು ಸಲ್ಲಿಸದ ಬಗ್ಗೆ ತೋರಿಸಲು ನಾನು ಸದರಿ ಅರ್ಜಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವದಿಲ್ಲ . ನಾನು ಸದರಿ ಅರ್ಜಿ ಪಂಚಾಯತಿ ಇವರಿಗೆ ನೀಡಿದ ಬಗ್ಗೆ ಅವರಿಂದ ಯಾವುದೇ ಸ್ವಿಕೃತಿಯನ್ನು ಪಡೆದುಕೊಂಡಿರುವದಿಲ್ಲ . ದಿನಾಂಕ 14-11-2016 ರಂದು ಮುತ್ತೂರ ಗ್ರಾಮ ಪಂಚಾಯತಿ ಇವರು ಮತ್ತು ಪಿ ಡಿ ಓ ರವರು ನನ್ನ ಆಸ್ತಿಯನ್ನು ಅತಳೆ ಮಾಡಲು ಬಂದಿದ್ದರು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿದ್ದು ಅದಕ್ಕಿಂತ ಪೂರ್ವದಲ್ಲಿ ಗ್ರಾಮ ಪಂಚಾಯತಿ ಇವರು ಅಕ್ಕಪಕ್ಕದವರಿಗೆ ಅಳತೆ ಮಾಡಲು ನೋಟಿಸನ್ನು ಸಲ್ಲಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ . ಗ್ರಾಮ ಪಂಚಾಯತಿ ಕಾರ್ಯದರ್ಶಿ ರವರಿಗೆ ಮತ್ತು ಪಿ ಡಿ ಓ ರವರಿಗೆ ಮತ್ತು ಗ್ರಾಮ ಪಂಚಾಯತಿ ಸದಸ್ಯರಿಗೆ ಸಮಾನ್ಯವಾಗಿ ಒಂದು ಆಸ್ತಿಯನ್ನು ಆಳತೆ ಮಾಡಲು ವಿಶೇಷ ಜ್ಞಾನ ಇರುವದಿಲ್ಲ ಎಂದರೆ ಸಾಕ್ಷಿ ಇರುತ್ತದೆ ಎಂದು ನುಡಿಯುತ್ತಾರೆ . ಈ ಮಾತನ್ನು ನಾನು ಸುಳ್ಳಾಗಿ ಹೇಳುತ್ತಿದ್ದೇನೆಂದೆರ ಸರಿಯಲ್ಲ . ಗ್ರಾಮ ಪಂಚಾಯತಿ ಕಾರ್ಯದರ್ಶಿ ರವರಿಗೆ ಮತ್ತು ಪಿ ಡಿ ಓ ರವರಿಗೆ ಮತ್ತು ಗ್ರಾಮ ಪಂಚಾಯತಿ ಸದಸ್ಯರಿಗೆ ಆಳತೆ ಮಾಡಲು ಯಾವುದೇ ರೀತಿಯ ಅಧಿಕಾರ ಇಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಅದು ಮೊಜನಿದಾರರಿಗೆ ಅಧಿಕಾರ ಇರುತ್ತದೆ ಎಂದು ನುಡಿಯುತ್ತಾರೆ . ಗ್ರಾಮ ಪಂಚಾಯತಿ ಇವರು ದಿನಾಂಕ 14-11-2016 ರಂದು ನನ್ನ ಆಸ್ತಿ 73 X 65 ಅಡಿ ಇದೆ ಎಂದು ಯಾವ ದಾಖಲಾತಿಗಳ ಅಧಾರದ ಮೇಲೆ ನಿರ್ಣಯಕ್ಕೆ ಬಂದಿರುತ್ತಾರೆ ಎಂದರೆ ಸಾಕ್ಷಿ ಮಲ್ಲಪ್ಪಾ ಬಿರಾದರ ಖರೀದಿ ಪತ್ರ ನೋಡಿ ಆಳತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಸದರಿ ಮಲ್ಲಪ್ಪಾ ಬಿರಾದರ ರವರ ಖರೀದಿ ಪತ್ರ ಪಂಚಾಯತಿಯಲ್ಲಿ ಲಭ್ಯ ಇದ್ದ ಬಗ್ಗೆ ಇಲ್ಲದ ಬಗ್ಗೆ ನನಗೆ ಮಾಹಿತಿ ಇಲ್ಲ . ಅಳತೆ ಮಾಡುವ ಕಾಲಕ್ಕೆ ಗ್ರಾಮ ಪಂಚಾಯತಿ ಇವರು ಖರೀದಿ ಪತ್ರ ಮತ್ತು ಉತಾರೆಯನ್ನು ಸಹ ನೋಡಿರುತ್ತಾರೆ . ಸದರಿ ಖರೀದಿ ಪತ್ರಗಳನ್ನು ಪಕ್ಷಗಾರರ ಬಳಿಯಿಂದ ತೆಗೆದುಕೊಂಡು ಗ್ರಾಮ ಪಂಚಾಯಿತಿ ರವರು ಅಳತೆ ಮಾಡಿರುತ್ತಾರೆ .

ದಿನಾಂಕ 14-11-2016 ರಂದು ನನ್ನ ಆಸ್ತಿಯನ್ನು ಆಜುಬಾಜು ದಾರರ ಖರೀದಿ ಪತ್ರಗಳನ್ನು ನೋಡಿ ಪಂಚಾಯತಿ ಇವರು ಅಳತೆ ಮಾಡಿರುತ್ತಾರೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಪಿ ಡಿ ಓ ರವರು

ಸರ್ಕಾರಿ ನೌಕರರು ಅಗಿರುತ್ತಾರೆ ಎಂದರೆ ಸರಿ . ಆಳತೆ ಮಾಡಿದ ನಂತರ ಅಥವಾ ಅಳತೆ ಮಾಡುವ ಕಾಲದಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಪಿ ಡಿ ಓ ರವರು ಟಿಪ್ಪಣಿ ಅಥವಾ ಪಂಚನಾಮೆ ಮಾಡಿ ಪಂಚರ ಸಹಿಗಳನ್ನು ಪಡೆದುಕೊಂಡಿರುವದಿಲ್ಲ . ಆ ದಿನ 16 ಗ್ರಾಮ ಪಂಚಾಯತಿ ಸದಸ್ಯರ ಪೈಕಿ 11 ಜನರು ಹಾಜರು ಇದ್ದರು ಉಳಿದ 5 ಜನ ಗೈರು ಹಾಜರು ಇದ್ದರು. ಅಲ್ಲಿ ಹಾಜರು ಇದ್ದ ಗ್ರಾಮ ಪಂಚಾಯತಿಯ ಸದಸ್ಯರು ಈ ರೀತಿ ಅಳತೆ ಮಾಡಿದ ಬಗ್ಗೆ ಬರೆದು ಸಹಿಯನ್ನು ಮಾಡಿರುವದಿಲ್ಲ . ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ಆಳತೆ ಮಾಡಿದ ದಿನದಂದು 16 ಸದಸ್ಯರ ಪೈಕಿ 10 ಜನ ಸದಸ್ಯರು ಪರವಾಗಿ ಸಹಿ ಮಾಡಿದ್ದು ಉಳಿದ 06 ಜನರು ವಿರುದ್ಧವಾಗಿ ಸಹಿ ಮಾಡಿರುತ್ತಾರೆಂದು ಠರಾವು ಆಗಿದೆ ಎಂದು ಬರೆಸಿರುತ್ತೇನೆ ಎಂದರೆ ಸರಿ . ಸದರಿ ಠರಾವಿನಲ್ಲಿ ಮೋಜಣಿ ಇಲಾಖೆಗೆ ಕಳುಹಿಸಿಕೊಡಬೇಕೆಂದು ಮತ್ತು ಸದರಿ ಅಳತೆ ಅಂತಿಮ ಅಳತೆ ಅಗಿಲ್ಲ ಎಂದು ನಮೂದು ಆಗಿರುತ್ತದೆ ಎಂದರೆ ಸರಿ . ಆ ದಿನ 06 ಜನ ಸದಸ್ಯರು ಏಕೆ ವಿರೋದ ಮಾಡಿರುತ್ತಾರೆ ಎಂದರೆ ಸಾಕ್ಷಿ 6 ನೇ ಪ್ರತಿವಾದಿ ಚಿನಗುಂಡಿ ಎಂಬ ಅಧ್ಯಕ್ಷರಿಗೆ ಹೇಳಿ ಠರಾವಿಗೆ ವಿರೋದ ವ್ಯಕ್ತ ಪಡಿಸಿರುತ್ತಾರೆ ಎಂದು ನುಡಿಯುತ್ತಾರೆ .

ಠರಾವಿನಲ್ಲಿ ಯಾವ ಮೋಜನಿದಾರಿರಗೆ ಆಸ್ತಿಯನ್ನು ನೀಡಿ ಅಳತೆ ಮಾಡಬೇಕೆಂದು ಬರೆದಿರುತ್ತಾರೆ ಎಂದರೆ ಸರ್ಕಾರದವರಿಗೆ ಕೊಟ್ಟ ಅಳತೆ ಮಾಡಬೇಕೆಂದು ನುಡಿಯುತ್ತಾರೆ . ನನ್ನ ಮುಖ್ಯ ವಿಚಾರಣೆಯಲ್ಲಿ 6 ಜನ ಸದಸ್ಯರು 7 ಮತ್ತು 8 ನೇ ಪ್ರತಿವಾದಿಗೆ ನಾನು ಊರಿನಲ್ಲಿ ಇಲ್ಲದ ಸಮಯದಲ್ಲಿ ನನ್ನ ಆಸ್ತಿಯನ್ನು ಅತಿಕ್ರಮಣ ಮಾಡಬೇಕೆಂದು ಕುಮ್ಮಕ್ಕು ನೀಡಿರುತ್ತಾರೆ ಎಂದು ಸುಳ್ಳಾಗಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ .7 ಮತ್ತು 8 ನೇ ಪ್ರತಿವಾದಿ ನನ್ನ ಅಸ್ತಿಯಲ್ಲಿ ಯಾವುದೇ ರೀತಿಯ ಅತಿಕ್ರಮಣ ಮಾಡಿರುವದಿಲ್ಲ , ಅತೀಕ್ರಮಣ ಮಾಡಿರುತ್ತಾರೆ ಎಂದು ಸುಳ್ಳಾಗಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ . 8 ನೇ ಪ್ರತಿವಾದಿ ನನ್ನ ಆಸ್ತಿಯಲ್ಲಿ ಅತಿಕ್ರಮಣ ಮಾಡಿ 4X 7 ಅಡಿ ಗುಡಿಸಲು ಕಟ್ಟಿರುತ್ತಾನೆ ಎಂದು ಸುಳ್ಳಾಗಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು 8 ನೇ ಪ್ರತಿವಾದಿ ಸದರಿ ಗುಡಿಸಲನ್ನು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ . ಈ ಮಾತನ್ನು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ಅದೇ ರೀತಿ 7 ನೇ ಪ್ರತಿವಾದಿ ನನ್ನ ಆಸ್ತಿಯಲ್ಲಿ ಅತಿಕ್ರಮಣ ಮಾಡಿ 4 X 5 ಅಡಿ ಕಟ್ಟೆ ಕಟ್ಟಿರುತ್ತಾನೆ ಎಂದು ಸುಳ್ಳಾಗಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ .

ವಾದ ಪತ್ರದ ಜೊತೆ ದಾವಾ ಆಸ್ತಿಯ ವಸ್ತು ಸ್ಥಿತಿಯನ್ನು ತೋರಿಸಲು ನಾನು ಕಚ್ಚಾ ನಕಾಶೆಯನ್ನು ನನ್ನ ದಾವೆಗೆ ಅನುಕೂಲವಾಗುವಂತೆ ತಯಾರಿಸಿ ಹಾಜರು ಪಡಿಸಿರುತ್ತಾನೆ ಎಂದರೆ ಸರಿಯಲ್ಲ .ದಿನಾಂಕ 14-12-2016 ರಂದು ಮೋಜನಿದಾರರು ದಾವಾ ಆಸ್ತಿಯನ್ನು ಆಳತೆ ಮಾಡಿ 7 ಮತ್ತು 8 ನೇ ಪ್ರತಿವಾದಿ ಅತೀಕ್ರಮಣ ಮಾಡಿದ ಬಗ್ಗೆ ನಕ್ಷೆ ತಯಾರಿಸಿ ಪಿ ಡಿ ಓ ಗ್ರಾಮ ಪಂಚಾಯತಿಯವರಿಗೆ ನೀಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ

ಹೇಳಿ ಬರೆಸಿರುತ್ತೇನೆ ಎಂದರೆ ಸರಿ . ಮೋಜಣಿದಾರರು ಸದರಿ ದಿನದಂದು ಸೀಮೆ ಕಲ್ಲುಗಳನ್ನು ನೋಡಿ ಅಳತೆ ಕಾರ್ಯ ವನ್ನು ಮಾಡಿರುತ್ತಾರೆ . ಆ ದಿನ ಪಂಚಾಯತಿ ರವರು ಹಳೆ ಖರೀದಿ ಪತ್ರ ಗಳನ್ನು ಅಥವಾ ಅಜುಬಾಜುದಾರರ ಖರೀದಿ ಪತ್ರ ಗಳನ್ನು ಮೋಜನಿದಾರರಿಗೆ ಮೋಜಣಿ ಮಾಡುವ ಕಾಲಕ್ಕೆ ನೀಡಿರುವದಿಲ್ಲ . ನಾನು ನನ್ನ ರಾಜಕೀಯ ಪ್ರಭಾವ ಬೀರಿ ಸದರಿ ಮೋಜನಿದಾರಿರಿಗೆ ನನ್ನ ಪರವಾಗಿ ವರದಿಯನ್ನು ಕೊಡಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ . ತದನಂತರ ಪಿ ಡಿ ಓ ರವರಿಗೆ ಮೋಜನಿದಾರರು ತನ್ನ ವರದಿ ಸಲ್ಲಿಸಿದ ನಂತರ ಪ್ರತಿವಾದಿಗಳು ತನ್ನ ರಾಜಕೀಯ ಪ್ರಬಾವ ಬೀರಿದ ಮೇರೆಗೆ ಪಂಚಾಯತಿ ರವರು ನನ್ನ ಹೆಸರಿನಲ್ಲಿ ಯಾವುದೇ ದಾಖಲಾತಿಗಳನ್ನು ಮಾಡಿರುವದಿಲ್ಲ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಪಂಚಾಯತಿ ರವರು ನನ್ನ ಆಸ್ತಿಯ ಸರಿಯಾದ ಕಾಗದ ಪತ್ರ ಗಳು ಇರುವದಿಲ್ಲ ಎಂದು ಹೇಳಿ ಯಾವುದೇ ನಕಾಶೆ ಮತ್ತು ದೃಡಿಕೃತ ಉತಾರೆಯನ್ನು ತಯಾರಿಸಿದೇ ನಾನು ನೀಡಿದ ಅರ್ಜಿಯನ್ನು ವಜಾ ಮಾಡಿರುತ್ತಾರೆ ಎಂದರೆ ಸಾಕ್ಷಿ ಬೇರೆ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಿ ಎಂದು ಆದೇಶ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಪಂಚಾಯತಿ ರವರು ನನ್ನ ಅಸ್ತಿಯ ಗಣಕಯಂತ್ರದ ಉತಾರೆಯನ್ನು ತಯಾರು ಮಾಡದೇ ಇದ್ದ ಕಾರಣ ಅದನ್ನು ಪ್ರಶ್ನಿಸಿ ನಾನು ತಾಲೂಕಾ ಪಂಚಾಯತಿಯಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ . ಸದರಿ ಮೇಲ್ಮನವಿಯನ್ನು ತಾಲೂಕಾ ಪಂಚಾಯತಿ ರವರು ಮುತ್ತೂರ ಗ್ರಾಮ ಪಂಚಾಯತಿರವರು ಮಾಡಿದ ಠರಾವು ಸರಿಯಾಗಿ ಇರುತ್ತದೆ ಎಂದು ಎತ್ತಿ ಹಿಡಿದು ನನ್ನ ಮೇಲ್ಮನವಿಯನ್ನು ವಜಾ ಮಾಡಿರುತ್ತಾರೆ ಎಂದರೆ ಸಾಕ್ಷಿ ಸಿವಿಲ್ ನ್ಯಾಯಾಲಯ ಕ್ಕೆ ಹೊಗಲು ಸೂಚನೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ . ನಾನು ಸದರಿ ಆದೇಶದ ವಿರುದ್ದ ಜಿಲ್ಲಾ ಪಂಚಾಯತಿಯಲ್ಲಿ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವದಿಲ್ಲ ಆದರೆ ಈ ನ್ಯಾಯಾಲಯಕ್ಕೆ ಈ ಕೇಸನ್ನು ಹುಡಿರುತ್ತನೆ .

7 ನೇ ಪ್ರತಿವಾದಿ ನಾನು ಹೇಳಿದ ಕಟ್ಟೆಯನ್ನು ತನ್ನ ಆಲಬಾಳ ಗ್ರಾಮದ ವಿ ಪಿ ಸಿ ನಂಬರ 267 ನೇದ್ದರ ಲ್ಲಿ ಕಟ್ಟಿರುತ್ತಾರೆ ನನ್ನ ಆಸ್ತಿಯಲ್ಲಿ ಕಟ್ಟಿರುವದಿಲ್ಲ ಎಂದರೆ ಸರಿಯಲ್ಲ . ಸದರಿ ಕಟ್ಟೆ ಮಾತಂಗಿ ಮತ್ತು ಯಲ್ಲಮ್ಮಾ ದೇವರಿಗೆ ಸೇರಿದ ಕಟ್ಟೆ ಇದ್ದು ಸುಮಾರು ವರ್ಷಗಳಿಂದ ಊರಿನ ಜನರು ಆರಾದನೆ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಕಟ್ಟೆಯಲ್ಲಿ ಎರಡು ದೊಡ್ಡು ಬಾನಿಗಳು ಇವೆ ಎಂದರೆ ಸರಿಯಲ್ಲ . ಸದರಿ ಬಾನಿಗಳಲ್ಲಿ ಪ್ರಾಣಿಗಳ ಚರ್ಮವನ್ನು ಹದಾ ಮಾಡಲು ಉಪಯೋಗ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಬಾನಿಯಲ್ಲಿ ಇದ್ದಂತಹ ನೀರನ್ನು ಊರಿನ ಜನರು ಚರ್ಮ ರೋಗ ಬರಬಾರದು ಎಂದು ಉಪಯೋಗ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಕಟ್ಟೆ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಊರಿನ ಜನರು ಬಂದು ಪೂಜೆ ಸಲ್ಲಿಸುತ್ತಾರೆ ಎಂದರೆ ಸರಿಯಲ್ಲ . ಪ್ರತಿ ವರ್ಷ ಬಣದ ಹುಣ್ಣಿಮೆದಂದು ಊರಿನ ಜನರು ಅಲ್ಲಿಗೆ ಹೋಗಿ ಪೂಜೆ ಮಾಡಿ ಮತ್ತು ಜಾತ್ರೆಯ ಸಹ ಆಗುತ್ತದೆ

ಎಂದರೆ ಸರಿಯಲ್ಲ . ಸುಮಾರು 100 ವರ್ಷಗಳಿಂದ ಪೂಜೆ ಮಾಡುತ್ತಾ ಊರಿನ ಜನರು ಬಂದಿರುತ್ತಾರೆ ಎಂದರೆ ಸರಿಯಲ್ಲ . ನಾನು ದುರುದ್ದೇಶದಿಂದ ಸದರಿ ಕಟ್ಟೆಯನ್ನು ತಗೆಸಲು ಕಟ್ಟೆ ನಮ್ಮ ಜಾಗೆಯಲ್ಲಿ ಬರುತ್ತದೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . 7 ಮತ್ತು 8 ನೇ ಪ್ರತಿವಾದಿಯರು ಪ್ರಾಣಿಗಳ ಚರ್ಮವನ್ನು ಹದಾ ಮಾಡಿ ಚರ್ಮವನ್ನು ಮಾರಾಟ ಮಾಡುವ ಉದ್ಯೋಗ ಮಾಡುತ್ತಾರೆ ಎಂದರೆ ಸರಿಯಲ್ಲ . ಹಿರಿಯರ ಕಾಲದಿಂದಲೂ ಸದರಿ ಕಟ್ಟೆಯ ಬಳಿ ದನಕರಗಳನ್ನು ಕಟ್ಟುತ್ತಾ , ಮೇವು ಇಡುವದು ಮತ್ತು ಬಣವಿ ಒಟ್ಟುವದು ಮಾಡುತ್ತಾ ವಹಿವಾಟವನ್ನು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ . ಸದರಿ ವಹಿವಾಟಕ್ಕೆ ನಾನು ಯಾವುದೇ ರೀತಿಯ ತೊಂದರೆ ಮಾಡಲು ಹಕ್ಕು ಇರುವದಿಲ್ಲ ಎಂದರೆ ಸರಿಯಲ್ಲ . 7 ಮತ್ತು 8 ನೇ ಪ್ರತಿವಾದಿಯರು ಅತಿಕ್ರಮಣ ಮಾಡಿದ ಪ್ರದೇಶ ನನ್ನ ಆಸ್ತಿಯಲ್ಲಿ ಇರುವದಿಲ್ಲ , ಅವರ ಆಸ್ತಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ . 7 ಮತ್ತು 8 ನೇ ಪ್ರತಿವಾದಿಯರು ತನ್ನ ಮನೆಯ ಹಿಂದೆ ಇರುವ ಕಟ್ಟೆಯನ್ನು ಉರಲು ಕಟ್ಟಿಗೆ ಇಡಲು ತಿಪ್ಪೆ ಸಲುವಾಗಿ ಉಪಯೋಗ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಕಟ್ಟೆಯಲ್ಲಿ ಪೂರ್ವಜ್ಜರ ಕಾಲದಿಂದಲೂ ಇಲ್ಲಿವರೆಗೆ ಪ್ರತಿವಾದಿಗಳು ಕಬ್ಜಾ ವಹಿವಾಟದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ , ನಾನು ಕಬ್ಜಾ ಇರುತ್ತದೆ ಎಂದು ನುಡಿಯುತ್ತಾರೆ . ನಾನು ಕಟ್ಟೆ ಮತ್ತು ಗುಡಿಸಲು ಇರುವ ಜಾಗೆಯಲ್ಲಿ ಎಂದಗೂ ಸಹ ಕಬ್ಜಾ ಮತ್ತು ವಹಿವಾಟದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಸುಮಾರು 40-50 ವರ್ಷಗಳಿಂದ ರಾಜಕೀಯದಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ . ಈ ಮಾತನ್ನು ನಾನು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ನನ್ನ ರಾಜಕೀಯ ಪ್ರಬಾವ ಬೆಳಿಸಿ ಪ್ರತಿವಾದಿಗಳ ಆಸ್ತಿಯನ್ನು ಎತ್ತಿಹಾಕಲು ಖೊಟ್ಟಿ ಕಾಗದ ಪತ್ರಗಳನ್ನು ಖೊಟ್ಟಿ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ . ಪ್ರತಿವಾದಿಗಳು ಬಡವರು ಇದ್ದು ಅವರಿಗೆ ವಿನಾಕಾರಣ ತೊಂದರೆ ಕೊಡಲು ಈ ಖೊಟ್ಟಿ ಕೇಸನ್ನು ಹುಡಿರುತ್ತೇನೆ ಎಂದರೆ ಸರಿಯಲ್ಲ . ನಾನು ಹಾಜರು ಪಡಿಸಿದ ಖರೀದಿ ಪತ್ರಗಳು ಅಂದಿನ ಸ್ಥಿತಿಗತಿಯನ್ನು ತೋರಿಸುತ್ತದೆ ಇಂದಿನ ಸ್ಥಿತಿಗತಿಯನ್ನು ತೋರಿಸಿರುವದಿಲ್ಲ ಎಂದರೆ ಸರಿಯಲ್ಲ . ನಾನು 73 X65 ಅಡಿ ಜಾಗೆಯಲ್ಲಿ ಎಂದಿಗೂ ಸಹ ಕಬ್ಜಾ ಮತ್ತು ವಹಿವಾಟದಲ್ಲಿ ಇರುವದಿಲ್ಲ ಎಂದರೆ ಸರಿಯಲ್ಲ . ಈ ದಾವೆಯನ್ನು ಹುಡುವ ಪೂರ್ವದಲ್ಲಿ ಪ್ರತಿವಾದಿಗಳಿಗೆ ಅತಿಕ್ರಮಣ ಮಾಡಿದ ಜಾಗೆಯನ್ನು ಬಿಟ್ಟು ಕೊಡಿ ಎಂದು ನಾನು ನೋಟಿಸ ಮೂಲಕ ಕೇಳಿಕೊಂಡಿರುವದಿಲ್ಲ ಸಾಕ್ಷಿ ಮುಂದುವರೆದು ಬಾಯಿ ಮಾತಿನಲ್ಲಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಈ ಮಾತನ್ನು ನಾನು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ಈ ದಾವೆಯನ್ನು ಹುಡುವ ಪೂರ್ವದಲ್ಲಿ ಪಂಚಾಯತಿ ರವರಿಗೆ ನನ್ನ ಅತಿಕ್ರಮಣ ಮಾಡಿದ ಜಾಗೆಯನ್ನು ಬಿಟ್ಟುಕೊಡಿಸಿ ಎಂದು ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿರುವದಿಲ್ಲ . ಅತಿಕ್ರಮಣ ಮಾಡಿದ ಜಾಗೆ ವಿ ಪಿ ಸಿ ನಂಬರ 267 ರಲ್ಲಿ ಬರುತ್ತದೆ , ನನ್ನ ಆಸ್ತಿಯಲ್ಲಿ ಬರುವದಿಲ್ಲ ಎಂದರೆ ಸರಿಯಲ್ಲ .

3 ರಿಂದ 6 ನೇ ಪ್ರತಿವಾದಿಯವರ ಮನೆಯ ಪೂರ್ವಕ್ಕೆ ರಸ್ತೆ ಇರುತ್ತದೆ ಎಂದರೆ ಅಲ್ಲಿ ರಸ್ತೆ ಇರುವದಿಲ್ಲ ಎಂದು ನುಡಿಯುತ್ತಾರೆ . ಅಲ್ಲಿ ರಸ್ತೆ ಇದ್ದರೂ ಸಹ ಉದ್ದೇಶ ಪೂರ್ವಕವಾಗಿ ನನ್ನ ಹಾತ ನಕಾಶೆಯಲ್ಲಿ ರಸ್ತೆಯನ್ನು ಕಾಣಿಸಿರುವದಿಲ್ಲ ಎಂದರೆ ಸರಿಯಲ್ಲ . ಸದರಿ ಪೂರ್ವದಲ್ಲಿ ಇರುವ ರಸ್ತೆಯನ್ನು ಹೊರತು ಪಡಿಸಿ 3 ರಿಂದ 6 ನೇ ಪ್ರತಿವಾದಿ ವರಗೆ ಬೇರೆ ರಸ್ತೆ ಇರುವದಿಲ್ಲ ಎಂದರೆ ಸಾಕ್ಷಿ ಅವರ ಮನೆಯ ಉತ್ತರ ದಿಕ್ಕಿಗೆ ಬೇರೆ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ . ಸದರಿ ಪ್ರತಿವಾದಿ ರವರು ನನ್ನ ಆಸ್ತಿಯಲ್ಲಿ ಅತಿಕ್ರಮ ಮಾಡಿರುತ್ತಾರೆ ಎಂದು ಸುಳ್ಳಾಗಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ . ನನ್ನ ಆಸ್ತಿಯ ಉದ್ದ ಅಳತೆ 73 X 65 ಅಡಿ ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ ಎಂದು ಸುಳ್ಳಾಗಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ . ನನ್ನ ಕೇಸಿಗೆ ಅನುಕೂಲವಾಗಲೀ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ ನುಡಿಯತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ